ತರಳಬಾಳು ಕೃಷಿ ವಿಜ್ಞಾನ ಕೇಂದ್ರ
ದಾವಣಗೆರೆ.

# ಎರಡು ಗುಂಟೆಯ ಮತ್ಸ್ಯ ವ್ಯವಹಾರ...!





ಡಾ|| ದೇವರಾಜ ಟಿ.ಎನ್.
ಕಾರ್ಯಕ್ರಮ ಸಂಯೋಜಕರು,

**ಡಿಸೆಂಬರ್ - 2013**

ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆ,
ದಾವಣಗೆರೆ.

# ಎರಡು ಗುಂಟೆಯ ಮತ್ಸ್ಯ ವ್ಯವಹಾರ...!

ಕೆಲವು ವರ್ಷಗಳ ಹಿಂದೆ, ನಮ್ಮ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಸರಿಸುಮಾರು ಎರಡು ಗುಂಟೆಯಷ್ಟು ಜಾಗ ಅನುಪಯುಕ್ತವಾಗಿ ಆಪು ಮತ್ತಿತರ ಕಳೆಗಳಿಂದ ತುಂಬಿತ್ತು. ಅಲ್ಲಿದ್ದ ಬೋರ್‌ವೆಲ್‌ನಿಂದ ಸಣ್ಣ ಪ್ರಮಾಣದಲ್ಲಿ ನೀರು ಸೋರಿಕೆಯಾಗುತ್ತಿತ್ತು. ಕಾರಣ ತೇವಾಂಶ ಸದಾ ಇರುತ್ತಿತ್ತು. ಅಲ್ಲಿ ತಗ್ಗು ದಿಣ್ಣೆಗಳಿಂದ ಕೂಡಿದ ಜಾಗವಿದ್ದು, ನೀರು ಸಹ ಸಂಗ್ರಹವಾಗಿ ಕಳೆಗಳ ಬೆಳವಣಿಗೆಗೆ ಸಹಕಾರಿಯಾಗಿತ್ತು. ಇದರಿಂದಾಗಿ ಯಾವುದೇ ರೀತಿಯ ಚಟುವಟಿಕೆಗಳಿಗೆ ಬಳಸದೆ, ಹಾಗೆಯೇ ದೃಷ್ಟಿ ಬೊಟ್ಟಿನಂತೆ ಬಿಡಲಾಗಿತ್ತು.

ಇದನ್ನು ಹಲವು ತಿಂಗಳುಗಳ ಕಾಲ ಗಮನಿಸಿದ ನನಗೆ ಹೊಳೆದದ್ದು ಒಂದು ಪುಟ್ಟ ಮೀನು ಸಾಕಣೆ ಕೊಳ. ಈ ಜಾಗದಲ್ಲಿ ಒಂದು ಕೊಳ ನಿರ್ಮಾಣ ಮಾಡಿದರೆ, ಬೋರ್‌ವೆಲ್‌ನಿಂದ ಸೋರುವ ನೀರನ್ನು ಕೊಳಕ್ಕೆ ಸೇರಿಸಿದಂತಾಗಿ, ಅಂತರ್ಜಲ ಮರುಪೂರ್ಣವಾಗುವಂತಿತ್ತು. ತಡಮಾಡಲಿಲ್ಲ. ಕೂಲಿ ಕೆಲಸಗಾರರಿಗೆ ಗುತ್ತಿಗೆ ನೀಡಿ ಕೊಳವೊಂದನ್ನು ನಿರ್ಮಾಣ ಮಾಡಿಸಲಾಯ್ತು. ಒಟ್ಟಾರೆ 5 ಅಡಿ ನೀರು ಯಾವುದೇ ಸಂದರ್ಭದಲ್ಲೂ ನಿಲ್ಲುವಂತಿತ್ತು. ಮೊದಮೊದಲು, ನೀರಿನ ಹೊರಸೋರುವಿಕೆ ಹೆಚ್ಚಿರುತ್ತಿತ್ತು. ಅದು ಕ್ರಮೇಣ ಕಡಿಮೆಯಾಯ್ತು. ಕೊಳದ ತಳಕ್ಕೆ 3 ಇಂಚಿನಷ್ಟು ಕಪ್ಪು ಜೇಡಿ ಮಣ್ಣನ್ನು ಹಾಕಿಸಿ, ತಳದಿಂದ ನೀರು ಇಂಗುವುದನ್ನು ಹತೋಟಿ ಮಾಡಲಾಯ್ತು. ಮೀನು ಕೊಯ್ಲು ಮತ್ತು ಇತರ ಸಂದರ್ಭಗಳಲ್ಲಿ ನೀರು ವರ್ಗಾವಣೆಗೆ ಅನುಕೂಲವಾಗುವಂತೆ ಕೊಳದ ಒಂದು ತುದಿಯಲ್ಲಿ ನೀರು ಹೊರಹೋಗಲು ದ್ವಾರವೊಂದರನ್ನು ನಿರ್ಮಿಸಲಾಯ್ತು.

ಇಷ್ಟು ಮಾಡುವಷ್ಟರಲ್ಲಿ ಮಳೆಗಾಲ ಆರಂಭವಾಗುವ ಸೂಚನೆ ಕಂಡಿತು. ಮೀನು ಮರಿ ಬಿಡುವ 2 ವಾರ ಮೊದಲು ಒಂದು ಕ್ವಿಂಟಾಲು ದನದ ಸಗಣಿಯನ್ನು ನೀರಿನಲ್ಲಿ ಕದಡಲಾಯ್ತು. ಈ ಸಗಣಿಯಲ್ಲಿರುವ ಸೂಕ್ಷ್ಮ ಜೀವಾಣುಗಳು ಆಹಾರ ಸರಪಳಿಯೊಂದನ್ನು ಪ್ರಾರಂಭಿಸುತ್ತವೆ. ಮಣ್ಣು ನೀರು, ಗಾಳಿ (ವಾತಾವರಣ) ಮತ್ತು ಬೆಳಕು (ಉಷ್ಣತೆ ) ಇವುಗಳ ಸಮ್ಮಿಲನದಿಂದ ಸೂಕ್ಷ್ಮಾಣುಗಳ ಜೀವ ರಾಸಾಯನಿಕ ಪ್ರಕ್ರಿಯೆಗಳು ಪ್ರಾರಂಭವಾಗುತ್ತವೆ. ಫಲಿತಾಂಶವಾಗಿ ಸಸ್ಯ ಜೀವಾಣುಗಳು ಮೊದಲ್ಗೊಂಡು ಪ್ರಾಣಿ ಜೀವಾಣುಗಳು ತದನಂತರ ಸೃಷ್ಟಿಯಾಗುತ್ತವೆ. ಜೊತೆಗೆ ಮೀನುಗಳಿಗೆ ನೈಸರ್ಗಿಕ ಆಹಾರವಾಗಿಯೂ ಸಹ ಇವುಗಳು ಒದಗಿ ಬರುತ್ತವೆ.

ದನದ ಸಗಣಿ ನಮ್ಮಲ್ಲಿಯೇ ಸಿಗುತ್ತಿತ್ತು. ಹಾಗಾಗಿ ಅದಕ್ಕೆ ಖರ್ಚಿರಲಿಲ್ಲ. ಹದಿನೈದು ದಿನಗಳಲ್ಲಿ ಕೊಳದ ನೀರು ತಿಳಿ ಹಳದಿ ಮಿಶ್ರಿತ ಹಸಿರು ಬಣ್ಣಕ್ಕೆ ತಿರುಗಿತ್ತು. ಮೀನು ಮರಿ ಬಿಡಲು ಅದೇ ಸಿಗ್ನಲ್ ! ನಾವ್ ರೆಡಿ... ಓಡಿ ಹೋಗಿ ಕೊಂಡಜ್ಜಿಯ ಮೀನು ಮರಿ ಪಾಲನಾ ಕೇಂದ್ರದಿಂದ 50 ಕಾಟ್ಲಾ, 50 ಮೃಗಾಲ್ 50 ಹುಲ್ಲುಗೆಂಡೆ , 50 ಬೆಳ್ಳಿಗೆಂಡೆ ಮತ್ತು 100 ಸಾಮಾನ್ಯ ಗೆಂಡೆ ತಳಿಗಳ ಬೆರಳುದ್ದ ಗಾತ್ರದ ಮೀನು ಮರಿಗಳನ್ನು ತಂದು ಕೊಳದಲ್ಲಿ ಬಿಟ್ಟೆವು. ಒಟ್ಟು ಮೀನು ಮರಿ ಬೆಲೆ ರೂ. 150/–.

ನನ್ನ ಸಹೊದ್ಯೋಗಿ ಮಿತ್ರರು ಹೆಚ್ಚಾಗಿ ಭೂ ಕೃಷಿ ಅಭ್ಯಾಸ ಮಾಡಿರುವವರು. ಜಲ ಕೃಷಿ ಪರಿಚಯ ನನಗಷ್ಟೇ ಇದ್ದುದು. ಹಾಗಾಗಿ ಹೆಚ್ಚಿನ ಜವಾಬ್ದಾರಿ ನನ್ನ ಮೇಲೆ ಇತ್ತು. ನಮ್ಮ ಕೆಲಸಗಾರರಲ್ಲಿ ಶಿವಣ್ಣ ಎಂಬುವವನು. ಯಾವ ಕೆಲಸಕ್ಕೂ ಸೈ ಎನ್ನುವಂತಿದ್ದ. ಅವನಿಗೆ ಹೇಳಿದೆ "ಪ್ರತಿದಿನ ಎರಡು ಬೊಗಸೆ ಶೇಂಗಾ ಹಿಂಡಿ ಮತ್ತು ಅಕ್ಕಿ ತೌಡು, ಸ್ವಲ್ಪ ಬೇಯಿಸಿ ನಂತರ ತಣ್ಣಗಾದ ಮೇಲೆ ಒಂದು ಚಮಚ

ವಿಟಮಿನ್ ಖನಿಜಾಂಶಗಳ ಪುಡಿ ಬೆರೆಸಿ, ಕೊಳದ ದಂಡೆಯಲ್ಲಿ ಹುಗಿದಿರುವ ಕೋಲಿಗೆ ಕಟ್ಟಿರೋ ಚೀಲದಲ್ಲಿ ಹಾಕು. ಜೊತೆಗೆ, ಪ್ರತಿ ಹದಿನೈದು ದಿನಗಳಿಗೊಮ್ಮೆ 50 ಕೆ.ಜಿ. ಸಗಣಿ ಕದಡಿ ಹಾಕು " ಎಂದೆ. ನಮ್ಮ ಮನೆ ಹತ್ರ ಒಂದು ಹಿಟ್ಟಿನ ಗಿರಣಿ ಇತ್ತು. ಅಲ್ಲಿ ಸಂಗ್ರಹವಾಗ್ತಿದ್ದಂತಹ ವಿವಿಧ ಹಿಟ್ಟುಗಳ ಉದುರಿದ ಪುಡಿಯನ್ನು ಕೊಂಡು ಆಹಾರವಾಗಿ ಬಳಸಲಾರಂಬಿಸಿದೆ. ಶಿವಣ್ಣನಿಗೆ ಅಲ್ಲಲ್ಲೇ ಬೆಳೆಸಿದ್ದ ಹುಲ್ಲಿನ ಗರಿಯ ತುದಿಗಳನ್ನು ಕಟ್ ಮಾಡಿ ಕೊಳಕ್ಕೆ ಹಾಕಲು ಹೇಳಿದೆ.

ಕೋಲಿಗೆ ಕಟ್ಟಿದ ಊಟದ ಚೀಲ ನೀರಿನಲ್ಲಿ ಮುಳುಗಿರ್ತಿತ್ತು. ಮೊದಲೇ ತಳದಲ್ಲಿ ಮಾಡಿದ ತೂತುಗಳಿಂದ ಚೀಲದಲ್ಲಿನ ಆಹಾರವನ್ನು ಸೇವಿಸುವ ಜಾಣ್ಮೆಯನ್ನು ಮೀನುಗಳು ಬೆಳೆಸಿಕೊಂಡವು. ಹುಲ್ಲಿನ ತುಂಡುಗಳನ್ನು ಹುಲ್ಲುಗೆಂಡೆ ಮೀನು ತಿನ್ನುತ್ತೆ. ಶಿವಣ್ಣ ನಾನು ಹೇಳಿದ ಕೆಲಸಗಳನ್ನು ಚಾಚೂ ತಪ್ಪದೆ ಮಾಡ್ತಿದ್ದ. ಪ್ರತಿ ಎರಡು ತಿಂಗಳಿಗೊಮ್ಮೆ ಊಟದ ಪ್ರಮಾಣವನ್ನು ಹೆಚ್ಚಿಸಬೇಕಾಗಿತ್ತು. ಏಕೆಂದರೆ, ಮೀನುಗಳ ಗಾತ್ರ ಸಹ ಹೆಚ್ಚಾಗ್ತಿತ್ತಲ್ಲ. ಅದಕ್ಕೆ ಅನೇಕ ಜನ ರೈತರು ನಾವು ಮಾಡ್ತಿದ್ದ ಕೆಲಸಗಳನ್ನು ನೋಡಿ ತರಬೇತಿ ತಗೊಂಡ್ರು, ಈ ರೀತಿ ಮಾಡ್ತಾ. 9 ತಿಂಗಳುಗಳು ಕಳೆದವು. 500 ಗ್ರಾಂ ಸರಾಸರಿ ತೂಕ ಗಳಿಸಿಕೊಂಡಿದ್ದು, ಕೊಯ್ಲು ಮಾಡುವ ಉತ್ಸಾಹಕ್ಕೆ ಅವಸರವಾಯ್ತು. ಎಷ್ಟು ಒಟ್ಟು ತೂಕ ಸಿಗಬಹುದು ಎನ್ನೋ ಕುತೂಹಲ, ಸರಿ ಹಾಗೂ ಹೀಗೂ ಮತ್ತೊಂದು ತಿಂಗಳು ತಳ್ಳಿದ್ದಾಯ್ತು. ಊಟದ ಸಾಮಾಗ್ರಿಗಳಿಗೆ ರೂ. 500/– ಖರ್ಚಾಗಿತ್ತು.

ನಾವ್ ರೆಡಿ, ಮತ್ತೊಮ್ಮೆ ನಮ್ ಮೀನುಗಾರ ಹನುಮಂತಪ್ಪನಿಗೆ ಕರೆಹೋಯ್ತು. ಬಂದು, ನೀರೆಲ್ಲಾ ಖಾಲಿ ಮಾಡಿ, ಬಲೆಹಾಕಿ ಮೀನುಗಳನ್ನು ಹಿಡಿದು, ರಾಶಿ ಹಾಕ್ದ ಜೊತೆಗೆರಡು ಹಾವು, ಶಿವಣ್ಣ ಅವನಿಗೆ ರೈಟ್ ಹ್ಯಾಂಡ್, ಮೀನು ತೂಕಹಾಕಿದ್ವಿ. 60 ಕೆ.ಜಿ. ಬರೋಬ್ಬರಿ. ಗಾತ್ರದ ಗ್ರೇಡಿಂಗ್ ಮಾಡಿದ್ವಿ. ನಾನು ಕೊಳದ ಸುತ್ತಾ

ಓಡಾಡ್ತಾ ಸಣ್ಣ ಪುಟ್ಟ ಸಹಾಯ ಮತ್ತು ಚೀರಾಟ ಮಾಡಿದ್ವಿ. 51.5 ಕೆ.ಜಿ.ದಪ್ಪ ಗಾತ್ರದ್ದು, 9 ಕೆ.ಜಿ. ಸಣ್ಣ ಗಾತ್ರದ್ದು, ಸಣ್ಣದ್ದನ್ನು ನಮ್ಮ ಜಮೀನಿನ ಕೆಲಸಗಾರರಿಗೆಲ್ಲ ಹಂಚಿದ್ದಿ. ಹನುಮಂತಪ್ಪ ಮೀನು ಬೇಡ, ಊರು ದೂರ, ರೂ. 200 ಕೊಡಿ ಅಂತ ತಗೊಂಡ, ದಪ್ಪ ಮೀನು ಕೆ.ಜಿ.ಗೆ. ರೂ. 35/– ರಂತೆ ನೇರ ದಾವಣಗೆರೆ ಮಾರ್ಕೆಟ್‌ಗೆ ಮಾರಾಟ ಮಾಡಿದ್ವಿ. ಆದಾಯ ರೂ. 1800/– ಬಂದಿತ್ತು.

ನನ್ನ ಶ್ರಮಕ್ಕೆ, ಸಗಣಿ, ಹುಲ್ಲಿಗೆ ಖರ್ಚು ತೋರಿಸಿಲ್ಲ. ಶಿವಣ್ಣನಿಗೆ ನಿತ್ಯದ ಕೂಲಿ ಬೇರೆ ಕೆಲಸಗಳಲ್ಲಿತ್ತು. ಮೀನಿನ ಕೆಲ್ಸ ಅವನ ಖುಷಿಗಿತ್ತು. ಇನ್ನೋಡಿ, 2 ಗುಂಟೆಗೆ ನಿವ್ವಳ ಲಾಭ ರೂ. 950/– ಗಳು ಹೆಕ್ಟೇರ್‌ಗೆ ಹೋಲಿಸಿದ್ರೆ ರೂ. 47,500/– ಗಳು. ಇದು ಬರಿ 10 ತಿಂಗಳುಗಳಲ್ಲಿ ಬಂದಂಥ ಆದಾಯ. ಅದಕ್ಕೆ ನಾವು ಮಾಡಿದ ಖರ್ಚು, ಪಟ್ಟ ಶ್ರಮ ಬಹಳಾನೇ ಕಡಿಮೆ. ಒಹ್ ಮರೆತಿದ್ದೆ. ಕೊಳದ ದಂಡೆಗಳ ಮೇಲೆ ಕುಂಬಳ, ನುಗ್ಗೆ, ತರಕಾರಿ, ಹುಲ್ಲು, ಚೆಂಡು ಹೂವು, ಬಾಳೆ ಗಿಡಗಳು, ಗೊಬ್ಬರದ ಗ್ಲಿರಿಸಿಡಿಯಾ ಇವೆಲ್ಲ ಹಾಕಿದ್ವಿ. ಇವುಗಳಿಗಾಗಿ ವಿಶೇಷ ಕಾಳಜಿ ವಹಿಸಿ ಯಾವುದೇ ಕೆಲಸ ಮಾಡ್ಲಿಲ್ಲ ಬೀಜ ಹಾಕಿದ್ದು ಬಿಟ್ರೆ 3 ಗೊನೆಬಾಳೆ, 15–20 ನುಗ್ಗೆ ಕಾಯಿ, 5–6 ಕುಂಬಳ ಕಾಯಿ 8 ಕೆಜಿ. ಹೆಮಾಟ ಹುಲ್ಲಿನ ಬೀಜ, ಬೊಗಸೆಗಳು ತುಂಬುವಷ್ಟು ಚೆಂಡು ಹೂವುಗಳು ಇಷ್ಟು ಮೇಲಿನ ಅವಧಿಯಲ್ಲಿ ಸಿಕ್ಕವು. ಇವಕ್ಕೆ ದುಡ್ಡು ಕಟ್ಟೋದು ಬೇಡ. ಇವೆಲ್ಲಾ ಮತ್ಸ್ಯ ವ್ಯವಹಾರದ ಬೋನಸ್, ಇಲ್ಲಿ ಸಿಕ್ಕ ಮೀನನ್ನು ಹೆಕ್ಟೇರ್‌ಗೆ ಹೋಲಿಸಿದ್ರೆ, 2550 ಕೆ.ಜಿ. ಅಂದ್ರೆ ಸುಮಾರು 2.55 ಟನ್ಸ್ (ರಾಷ್ಟ್ರೀಯ ಸರಾಸರಿ 2.5 ಟನ್/ಹೆಕ್ಟೇರ್)

ನೆನಪಿಡಿ. ಇಲ್ಲಿ ಸಣ್ಣ ಗಾತ್ರದ ಮೀನಿನ ದುಡ್ಡು ಮತ್ತು ಪ್ರಮಾಣ ಎರಡನ್ನೂ ನಾನು ಗಮನಕ್ಕೆ ತಗೊಂಡಿಲ್ಲ.

ಅಲ್ಲಿಗೆ ಮತ್ಸ್ಯ ವ್ಯವಹಾರ ಎಲ್ಲಿಗೆ ಬಂದು ನಿಲ್ತು ?

ಅನುಪಯುಕ್ತ ತುಂಡು ಭೂಮಿ ನಮ್ಮ ಜಮೀನಿನಲ್ಲಿದ್ರೆ, ವ್ಯರ್ಥವಾಗಿ ಬಿಡಬೇಡಿ. ಗುಂಡಿ ತೋಡಿ, ನೀರು ಬಿಡಿ, ಮೀನು ಮರಿ ಹಾಕಿ, ಹಣ ಎಣಿಸಿ, ಹೀಗೆ ಮಾಡುವಾಗ ನೀವು ಪುಣ್ಯದ ಕೆಲ್ಸ ಮಾಡ್ತಾ ಇರ್ತೀರಿ

ಅನ್ನೋದು ನೆನಪಿರ್ಲಿ.ಹಸಿದ ಹೊಟ್ಟೆಗಳಿಗೆ ಪೌಷ್ಠಿಕವಾದ ಮೀನು ಆಹಾರವನ್ನು ನೀವು ಬೆಳೆದು ಕೊಟ್ಟತೀರ್ರಿ. ಮಳೆ ನೀರು ಹಿಡಿದು, ಗುಂಡಿಗೆ ಬಿಟ್ರೆ ಸಾಕು. ಭತ್ತ, ಮೆಕ್ಕೆಜೋಳ, ಕಬ್ಬು, ಹತ್ತಿ ಜೊತೆಗೆ ಮೀನಿಗೂ ಸ್ವಲ್ಪ ನಿಮ್ಮ ಹೃದಯ ತಲೆಯಲ್ಲಿ ಜಾಗ ನೀಡಿ ಫ್ರೇಂಡ್ಸ್, ಈಗ ಇಷ್ಟು ಸಾಕಾ ? ಓ.ಕೆ.

ಇನ್ನೊಂದ್ಸಾರಿ, ಹೊಸದಾಗಿ ತಂದು ಬಿಟ್ಟಿರೋ ಅಮೂಲ್ ಸಾಮಾನ್ಯ ಗೆಂಡೆ ಮೀನು ಮತ್ತು ಸಿಹಿ ನೀರು ದೈತ್ಯ ಸೀಗಡಿ, ಹಾಗೇನೇ ವಿಶೇಷವಾಗಿ ಉತ್ಪತ್ತಿ ಮಾಡಲಾಗುತ್ತಿರೋ ಸೊಳ್ಳೆ ಕೋಶಭಕ್ಷಕ ಮೀನುಗಳ ಪುರಾಣವನ್ನು ಹೇಳ್ತೀನೆ.






**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ :**

ಕಾರ್ಯಕ್ರಮ ಸಂಯೋಜಕರು :

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ಫೋ : 08182-263462, : ಫ್ಯಾಕ್ಸ್ 08192-260969

Emall : dvgtkvk@yahoo.com


Ashwini Printers. Davangere. Mob : 9845781782